ಓಎಸ್ 112/2022 ಪಿ ಡಬ್ಲ್ಯೂ 1 ಹೆಚ್.ಸಿ.ಮಹದೇವ

ದಿನಾಂಕ 19.06.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲುಃ</u> 1 ನೇ ಪ್ರತಿವಾದಿಯ ಪರ ಶ್ರೀ ಬಿ.ಎನ್.ಜಿ. ವಕೀಲರಿಂದಃ

ಮದೇಗೌಡ ಉ. ಚಿಕ್ಕಪುಟ್ಟೇಗೌಡರವರ ಮೊದಲನೆಯ ಹೆಂಡತಿಯ ಹೆಸರು ಸಿದ್ದಮ್ಮ ಎಂದರೆ ಸರಿ. ಸದರಿ ಸಿದ್ದಮ್ಮರವರ ಮರಣಾ ನಂತರ ದೇವಮ್ಮ ಎನ್ನುವವರನ್ನು ಮದುವೆ ಆಗಿದ್ದರು ಎಂದರೆ ಸಾಕ್ಷಿಯು ಸಿದ್ದಮ್ಮರವರು ಇದ್ದಾಗಲೇ ಮದುವೆ ಆಗಿದ್ದರು ಎಂದು ನುಡಿಯುತ್ತಾರೆ. ದೇಮಮ್ಮರವರ ಜೊತೆ ಯಾವಾಗ ಮದುವೆ ಆಯಿತು ಎಂದರೆ ಹೇಳಲಾಗುವುದಿಲ್ಲ. ಮೊದಲನೇ ಹೆಂಡತಿ ಸಿದ್ದಮ್ಮರವರು ಯಾವ ವರ್ಷ ಮರಣ ಹೊಂದಿದರು ಎಂದು ಹೇಳಲಾಗುವುದಿಲ್ಲ. ಸಿದ್ದಮ್ಮರವರು ಮರಣಾ ನಂತರವೇ ದೇವಮ್ಮರವರನ್ನು ಮದುವೆ ಆಗಿದ್ದರು ಎಂದರೆ ಸುಳ್ಳು. ಸದರಿ ದೇಮಮ್ಮರವರು ಜೀವಂತವಾಗದ್ದಾಗಲೇ ಜಯಮ್ಮರವರನ್ನು ಮದುವೆ ಆಗಿದ್ದರು ಎಂದರೆ ಸರಿ. ಸದರಿ ದೇವಮ್ಮರವರು 1 ನೇ ಪ್ರತಿವಾದಿಯ ತಂದೆ ಪಾಪಣ್ಣರವರನ್ನು ದತ್ತು ತೆಗೆದುಕೊಂಡಿದ್ದರು ಎಂದರೆ ಸುಳ್ಳು. ಸಾಕ್ಷಿಯು 1983-84 ರ ಧೃಢೀಕೃತ ಪಹಣಿಯನ್ನು ನೋಡಿ ಸರ್ವೆ ನಂ.9/ಎ ರಲ್ಲಿಯ 0.41 ಗುಂಟೆ ಜಮೀನು ದೇವಮ್ಮರವರ ಹೆಸರಿಗಿರುತ್ತದೆಂದು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ.9/ಎ 2 ರಲ್ಲಿಯ ಪಹಣಿಯಲ್ಲಿ ಹೆಚ್.ಎಸ್.ಪಾಪಣ್ಣ ಬಿನ್ ಸಿದ್ದೇಗೌಡ ಹೊಂಗಳ್ಳಿ ಎಂದು ಇರುತ್ತದೆಂದು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ಪಾಪಣ್ಣರವರ ಹೆಸರಿನಲ್ಲಿದ್ದ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಆಗಿರುತ್ತದೆಂದು ಸರ್ವೆ ನಂ.9 ಪಿ.3 ರ ಪಹಣಿಯನ್ನು ಅದನ್ನು ನಿ.ಡಿ. 3 ಎಂದು ಗುರುತಿಸಲಾಯಿತು. ಅದೇ ಜಮೀನಿನ ಖಾತೆಯು 2 ನೇ ಪ್ರತಿವಾದಿಯ ಹೆಸರಿಗೆ ನಿಪಿ.12 ಮತ್ತು 13 ರ ಪಹಣಿಗಳಂತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ.

2. ಮದೇಗೌಡರವರು ಜೀವಂತವಾಗಿದ್ದಾಗಲೇ ದಾವಾ ಆಸ್ತಿಯು ದೇವಮ್ಮರವರ ಹೆಸರಿಗೆ ಖಾತೆ ಆಗಿರುತ್ತದೆಂದರೆ ಸುಳ್ಳು. ಅದೇ ಪ್ರಕಾರ ದೇಮವ್ಮರವರ ಹೆಸರಿಗೆ ಖಾತೆ ಬರುತ್ತಿತ್ತು ಎಂದರೆ ಸುಳ್ಳು. ನಂತರ ಸದರಿ

ಆಸ್ತಿಯು ದೇವಮ್ಮರವರ ದತ್ತು ಮಗನಾದ 1ನೇ ಪ್ರತಿವಾದಿ ತಂದೆ ಪಾಪಣ್ಣರವರ ಹೆಸರಿಗೆ ಎಂ.ಆರ್.ನಂ.8/1979-80 ರಂತೆ ಖಾತೆ ಆಗಿರುತ್ತದೆಂದರೆ ಸುಳ್ಳು. ನಂತರ ಸದರಿ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಎಂ.ಆರ್. ನಂ.37/1995-96 ರಂತೆ ಖಾತೆ ಆಗಿರುತ್ತದೆಂದರೆ ಸುಳ್ಳು. 1ನೇ ಪ್ರತಿವಾದಿಯು ಮಾಲೀಕನಾಗಿದಂತಹ ಆಸ್ತಿಯನ್ನು 2ನೇ ಪ್ರತಿವಾದಿಗೆ ನೋಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದು, ಆ ಪ್ರಕಾರ 2ನೇ ಪ್ರತಿವಾದಿಯ ಹೆಸರಿಗೆ ಎಂ.ಆರ್.ನಂ.59-2021-22 ರಂತೆ ಖಾತೆ ಆಗಿರುತ್ತದೆಂದರೆ ಸುಳ್ಳು. 1ನೇ ಪ್ರತಿವಾದಿ ಗುಣಶೇಖರ್ ರವರು ತಂದೆಯ ಕಾಲದಿಂದಲೂ ಮಾಲೀಕನಾಗಿದ್ದಂತಹ ಆಸ್ತಿಯನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಸದರಿ ಆಸ್ತಿಯಲ್ಲಿ 2ನೇ ಪ್ರತಿವಾದಿಯೇ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ ಸುಳ್ಳು. ದೇವಮ್ಮರವರು ತಮ್ಮ ಜೀವಿತ ಕಾಲಾವಧಿಯಲ್ಲಿ ತನಗೆ ಸೇರಿದ ಆಸ್ತಿಯು ಯಾರಿಗೆ ಸೇರಬೇಕೆಂದು ದಾಖಲೆ ಬರೆದಿರುತ್ತಾರೆ, ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆ ದಾಖಲೆ ಬರೆದಿರುತ್ತಾರೆಂದು ಕೇಸ್ ನಲ್ಲಿ ಎಲ್ಲಿಯೂ ಹೇಳಿಲ್ಲ. 1ನೇ ಪ್ರತಿವಾದಿಯ ತಂದೆ ಪಾಪಣ್ಣರವರನ್ನು ದತ್ತು ಮಗ ಎಂದು ದೇವಮ್ಮರವರು ಮರಣ ಶಾಸನ ಬರೆದಿರುತ್ತಾರೆಂದು ಸುಳ್ಳು. ದೇವಮ್ಮರವರು ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. ದೇವಮ್ಮರವರಿಗೆ ಸೇರಿದ ಆಸ್ತಿಯಲ್ಲಿ ಪಾಪಣ್ಣರವರು ಸ್ವಾಧೀನದಲ್ಲಿದ್ದರು, ನಂತರ 1ನೇ ಪ್ರತಿವಾದಿ ಸ್ವಾಧೀನದಲ್ಲಿದ್ದರು ಎಂದರೆ ಸುಳ್ಳು . ದೇವಮ್ಮ ಮತ್ತು ಜಯಮ್ಮರವರ ಹೆಸರಿಗೆ ಸೇರಿದ ಆಸ್ತಿಗಳು ಎಂ.ಆರ್. ನಂ.72/1988-89 ರಂತೆ ಪೌತಿ ಖಾತೆ ಆಗಿರುತ್ತದೆ ಎಂ.ಆರ್. ನ ಧೃಢೀಕೃತ ನಕಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ.4 ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ.12 ರ ಪ್ರಕಾರ 2 ನೇ ಪ್ರತಿವಾದಿಯ ಹೆಸರಿಗೆ ಎಂ.ಆರ್.ಟಿ.59/2021-22 ರಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ನಿ.ಡಿ.2 ರ ಪ್ರಕಾರ ಎಂ.ಆರ್. ನಂ.8/79-80 ರಂತೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ದೇವಮ್ಮರವರು ತನಗೆ ಸೇರಿದ ಆಸ್ತಿಯನ್ನು ನಮಗೆ ಸೇರತಕ್ಕದ್ದು ಎಂದು ದಾಖಲೆ ಬರೆದುಕೊಟ್ಟಿರುತ್ತಾರೆ, ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಸದರಿ ವಿಷಯವನ್ನು ದಾವೆಯಲ್ಲಿ ಹೇಳಿಲ್ಲ. ದಾವಾ ಆಸ್ತಿಯಲ್ಲಿ ನಾನೇ ಸ್ವಾಧೀನದಲ್ಲಿರುತ್ತೇನೆಂದು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ,

ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳ ಆಸ್ತಿಯನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ